ದಿನಾಂಕ 11-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಮುಂದುವರಿದು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-17 ರಿಂದ 19 | ಆಧಾರ್ ಕಾರ್ಡಿನ ನೋಟರಿಕೃತ ಪ್ರತಿಗಳು |

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೆ.

**ಪಾಟೀ ಸವಾಲು ಃ 2 ನೇ ಎದುರುದಾರರ ಪರ ವಕೀಲರಿಂದ**

ಅಪಘಾತವನ್ನು ನಾನು ನೋಡಿಲ್ಲ . ಆದ್ದರಿಂ ದ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. . ನನ್ನ ಯಜಮಾನರಿಗೆ ಆರೋಗ್ಯ ಸಮಸ್ಯೆ ಇದ್ದುದರಿಂದ ಅವರು ತಲೆ ತಿರುಗಿ ಬಿದ್ದು ಗಾಯಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸ್ಕಾರ್ಪಿಯೋ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ನಾನು ಗೃಹಿಣಿ ಮನೆಯಲ್ಲಿ ಇರುತ್ತೇನೆ . ನನಗೆ ಇಬ್ಬರು ಮಕ್ಕಳು ಅವರ ಹೆಸರು ಗೌತಮ್ ಮತ್ತು ವಿನೀತಾ . ನನ್ನ ಮಗ ಗೌತಮ್ ಮದುವೆ ಆಗಿರುತ್ತದೆ . ಆತ ಬೆಂಗಳೂರಿನ ಕಂಪೆನಿಯಲ್ಲಿ ಕೆಲಸ ಮಾಡುತ್ತಾನೆ . ನನ್ನ ಮಗಳು ವಿನೀತಾ ಳಿಗೆ ಮದುವೆ ಆಗಿದೆ . ಆಕೆ ಮದುವೆ ಆಗಿ ಶಿವಮೊಗ್ಗದಲ್ಲಿ ಗಂಡನ ಮನೆಯಲ್ಲಿ ವಾಸವಾಗಿರುತಾಳೆ ಹಾಲಿ ಈಗ ನಮ್ಮ

ಮನೆಯಲ್ಲಿ ಇದ್ದಾಳೆ . ಅಪಘಾತ ಆಗುವಾಗ ನಾನು ಮತ್ತು ನನ್ನ ಗಂಡ ಮಾತ್ರ ನಮ್ಮ ಮನೆಯಲ್ಲಿ ಒಟ್ಟಿಗೆ ಇದ್ದೆವು . ನನ್ನ ಮತ್ತು ನನ್ನ ಗಂಡನ ಯೋಗಕ್ಷೇಮವನ್ನು ನನ್ನ ಮಕ್ಕಳು ನೋಡಿಕೊಳ್ಳುತಿದ್ದ . ನನ್ನ ಗಂಡನಿಗೆ ಕಿಡ್ನಿ ಕಾನ್ಸರ್ ಇತ್ತು ಎಂದರೆ ಸರಿಯಲ್ಲ . ನನ್ನ ಗಂಡನಿಗೆ ಆರೋಗ್ಯದಲ್ಲಿ ಯಾವುದೇ ಸಮಸ್ಯೆ ಇರಲಿಲ್ಲ . ಆಸ್ಪತ್ರೆಗೆ ದಾಖಲಾಗಿದ್ದಾಗ ನನ್ನ ಗಂಡನಿಗೆ ಕಿಡ್ನಿ ಕಾನ್ಸರ್ ಇದೆ ಎಂದು ವೈದ್ಯರು ಹೇಳಿಲ್ಲ. ನಿಪಿ 5 ದಾಖಲೆಯಲ್ಲಿ Cause of death ಕಾಲಂ ನಲ್ಲಿ ನನ್ನ ಗಂಡ ಕಿಡ್ನಿ ಕಾನ್ಸರ್ ನಿಂದ ಅದು ದೇಹದ ಎಲ್ಲಾ ಭಾಗಗಳಿಗೆ ಅಂಗಗಳಿಗೆ ಹಬ್ಬಿದೆ ಎಂದು ಅದರಲ್ಲಿ ಸಾವಿಗೆ ಕಾರಣವನ್ನು ಕಾಣಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದಿಂದ ಆದ ಗಾಯಗಳಿಗೂ ನನ್ನ ಗಂಡನ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡನಿಗೆ 64 ವರ್ಷ ವಯಸ್ಸು ಆಗಿತ್ತು . ನನ್ನ ಗಂಡ ಪೋಸ್ಟ್ ಆಫೀಸಿ ನಿಂದ ನಿವೃತ್ತಿ ಆಗಿದ್ದರು . ನನ್ನ ಗಂಡನಿಗೆ ತಿಂಗಳಿಗೆ ರೂ 40000 ಪಿಂಚಣಿ ಬರುತಿತ್ತು . ನನ್ನ ಗಂಡ ತೀರಿಕೊಂಡ ನಂತರ ನನಗೆ ರೂ 20000 ಪಿಂಚಣಿ ಬರುತಿದೆ . ನನ್ನ ಗಂಡನ ವಯಸ್ಸಿನ ಬಗ್ಗೆ ದಾಖಲೆಯನ್ನು ಹಾಜರುಪಡಿಸಬಹುದು. ನನ್ನ ಗಂಡನಿಗೆ ಎಷ್ಟು ಪಿಂಚಣಿ ಬರುತಿತ್ತು ಮತ್ತು ನನಗೆ ಈಗ ಎಷ್ಟು ಪಿಂಚಣಿ ಬರುತಿದೆ ಎನ್ನುವ ಬಗ್ಗೆ ದಾಖಲೆಯನ್ನು ಹಾಜರುಪಡಿಸುತ್ತೇನೆ . ಮುಖ್ಯವಿಚಾರಣೆಯಲ್ಲಿ ಹೇಳಿರುವಷ್ಟು ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ಗಂಡನ ತಪ್ಪಿನಿಂದ ಆಗಿರುವುದರಿಂದ ಮತ್ತು ನನ್ನ ಗಂಡನ ಸಾವು ಕಿಡ್ನಿ ಕಾನ್ಸರ್ ನಿಂದ ಅಗಿರುವುದರಿಂದ ಎರಡನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನು ಬಾದ್ಯಸ್ಥಳಲ್ಲ ಎಂದರೆ ಸರಿಯಲ್ಲ.

ಎಂ.ವಿ.ಸಿ. 83/2024
ಪಿ.ಡಬ್ಲ್ಯೂ : 01

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.